ದಿಃ 20.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಹೆಚ್.ವಿ.ಯ್ಯು. ವಕೀಲರಿಂದ ,</u>**

1. ವಾದಿ ನನ್ನ ಅಕ್ಕ. ವಾದಿಯರು ಹಾಗೂ ಪ್ರತಿವಾದಿಯರು ನನಗೆ ಪರಿಚಯಸ್ತರು. ಪ್ರತಿವಾದಿಯ ಅಣ್ಣ - ತಮ್ಮಂದಿರು ಸುಮಾರು 45 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಇರುತ್ತಾರೆ. ಅವರುಗಳೆಲ್ಲರಿಗೆ ಆಗಲೇ ಮದುವೆ ಆಗಿತ್ತು. ಪ್ರತಿವಾದಿಯ ತಂದೆಗೆ ಸುಮಾರು 6 ಎಕರೆ ಜಮೀನು ಇತ್ತು. ಅದನ್ನು ಪ್ರತಿವಾದಿಯ ಸಹೋದರೆಲ್ಲರೂ ವಿಭಾಗ ಮಾಡಿಕೊಂಡಿರುತ್ತಾರೆ. ಆ ಸಂಬಂಧ ದಾಖಲೆ ಆಗಿರುವುದಿಲ್ಲ. ಪ್ರತಿವಾದಿಗೆ 3 ಜನ ಸಹೋದರರು ಹಾಗೂ ಇಬ್ಬರು ಸಹೋದರಿಯರು. ಸದರಿ ವಿಭಾಗದಲ್ಲಿ ಯಾರು ಯಾರಿಗೆ ಏನು ಸ್ವತ್ತು ಹೋಗಿರುತ್ತದೆ ನನಗೆ ತಿಳಿದಿಲ್ಲ. ಸದರಿ ಸ್ವತ್ತು ಈಗಲೂ ಅವರ ಬಳಿಯೇ ಇರುತ್ತದೆ. ಪ್ರತಿವಾದಿಯ ಸೋದರ ಸೋದರಿಯರು ಹಾಲಿ ವಾದಿಯರೊಂದಿಗೆ ವಿಶ್ವಾಸದಿಂದ ಇರುತ್ತಾರೆ. 1 ನೇ ವಾದಿಯ ಗಂಡ ಕೆ.ಇ.ಬಿ. ಯಲ್ಲಿ ಲೈನ್ ಮೆನ್ ಆಗಿದ್ದರು. ಆತ 40 ವರ್ಷ ಸೇವೆಯಲ್ಲಿ ಇದ್ದರು. ಆತ ದಿಃ 23-07-2020 ರಲ್ಲಿ ಮೃತ ಪಟ್ಟಿರುತ್ತಾರೆ. ಆತ ಎನ್.ಆರ್.ಪುರ ಹಾಗೂ ಶೃಂಗೇರಿಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಆತ ಮದುವೆಯಾದ ನಂತರ ಕೆಲಸಕ್ಕೆ ಸೇರಿರುತ್ತಾರೆ. ಆತ ವರ್ಗಾವಣೆ ಆದ ಸ್ಥಳದಲ್ಲಿಯೇ ಇಲಾಖಾ ವಸತಿ ಗೃಹದಲ್ಲಿ ವಾಸ ಇದ್ದರು. ನಿವೃತ್ತಿ ಆದ 4 ವರ್ಷಗಳ ನಂತರ ಆತ ಮೃತ ಪಟ್ಟಿರುತ್ತಾರೆ. ಆತ ಕೊನೆಯದಾಗಿ ಶೃಂಗೇರಿಯಲ್ಲಿ ಸೇವೆ ಸಲ್ಲಿಸಿದ್ದರು. ಆತ ಅಲ್ಲಿಯೇ ನಿವೃತ್ತಿ ಹೊಂದಿದ್ದು ನಂತರ ಅಲ್ಲಿಯೇ ಬಾಡಿಗೆ ಮನೆಯಲ್ಲಿ ವಾಸವಿದ್ದರು. ನಂತರ ಆತ ಅಲ್ಲಿಯೇ ಮೃತ ಪಟ್ಟಿರುತ್ತಾರೆ.

2. ಪ್ರತಿವಾದಿ ಕುಟುಂಬದಲ್ಲಿನ ವಿಭಾಗದಲ್ಲಿ ನಾನು ಭಾಗವಹಿಸಿರಲಿಲ್ಲ. ಪ್ರತಿವಾದಿಗೆ ವ್ಯವಸಾಯ ಹೊರತು ಪಡಿಸಿ ಬೇರೆ ಆದಾಯ ಇಲ್ಲ ಎಂದರೆ ಸರಿ. ಪ್ರತಿವಾದಿ ಎಂದೂ

ವಾದಿಯರಿಗೆ ಹಣಕಾಸಿನ ಸಹಾಯ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯ ತಂದೆಗೆ ಏನು ಸ್ವತ್ತುಗಳು ಇದ್ದವು ನನಗೆ ತಿಳಿದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ತಿಳಿದ ಹಾಗೇ ಅವರಿಗೆ 6 ಎಕರೆ ಜಮೀನು ಹಾಗೂ 80 X 50 ಅಡಿ ನಿವೇಶನ ಇತ್ತು ಎಂದು ನುಡಿಯುತ್ತಾರೆ. ಅದನ್ನು ಅವರುಗಳು ಹಂಚಿಕೆ ಮಾಡಿಕೊಂಡಿರುತ್ತಾರೆ. ಸದರಿ ಹಂಚಿಕೆ ವಿಷಯವನ್ನು ವಾದಿಯರು ನನಗೆ ತಿಳಿಸಿರುತ್ತಾರೆ. ವಿಭಾಗದ ನಂತರ ಸದರಿ ನಿವೇಶನದಲ್ಲಿ ವಾದಿಯರು ಹಾಗೂ ಪ್ರತಿವಾದಿ ಪ್ರತ್ಯೇಕವಾಗಿ ಮನೆಗಳನ್ನು ನಿರ್ಮಿಸಿರುತ್ತಾರೆ. ಸದರಿ ಮನೆಯನ್ನು ನಿರ್ಮಿಸಲು ಅವರುಗಳು ಪರವಾನಿಗೆ ಪಡೆದಿರುವುದಿಲ್ಲ. ಸದರಿ ವಿಭಾಗದಂತೆ 1 ನೇ ವಾದಿಯ ಗಂಡನ ಹೆಸರಿಗೆ ಖಾತೆ ವರ್ಗಾವಣೆ ಆಗಿಲ್ಲ ಎಂದರೆ ಸರಿ. ಸದರಿ ಸ್ವತ್ತಿಗೆ ವಾದಿಯರು ಕಂದಾಯ ಪಾವತಿಸಿರುವುದಿಲ್ಲ. ದಾವಾ ಸ್ವತ್ತಿನ ಖಾತೆ ಹಾಲಿ ಪ್ರತಿವಾದಿಯ ತಂದೆಯ ಹೆಸರಿಗೆ ಇರುತ್ತದೆ. 1972 ನೇ ಸಾಲಿನಿಂದ ದಾವಾ ಸ್ವತ್ತಿನ ಖಾತೆ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಯೇ ವಾಸ ಇರುತ್ತಾರೆ ಎಂದರೆ ಸಾಕ್ಷಿ ಅವರ ಪಾಲಿನಲ್ಲಿ ಮಾತ್ರ ವಾಸ ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ 'ಇ' ಸ್ವತ್ತು ದಾಖಲೆ ಸಹ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. 1 ನೇ ವಾದಿಯ ಗಂಡ 2 ನೇ ತರಗತಿ ವರೆಗೆ ವ್ಯಾಸಾಂಗ ಮಾಡಿದ್ದರು. ಆತ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ಆ ಸಂಬಂಧ ದಾಖಲೆ ಇರುತ್ತದೆ.

3. 1 ನೇ ವಾದಿಯ ಗಂಡ 1984 ರಲ್ಲಿ ಪ್ರತಿವಾದಿ ಹಾಗೂ ಇತರೆ ಸಹೋದರರಿಂದ ಹಣ ಪಡೆದು ದಾವಾ ಸ್ವತ್ತಿನ ಮೇಲಿನ ತನ್ನ ಹಕ್ಕನ್ನು ಅವರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ 1 ನೇ ವಾದಿಯ ಗಂಡ ಉರ್ದು ಭಾಷೆಯಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆತ ಕನ್ನಡದಲ್ಲಿ ಮಾತ್ರ ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ಸಂಬಂಧ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷಿ

ಮುಂದುವರೆದು ಪ್ರತಿವಾದಿ ದಾವಾ ಸ್ವತ್ತಿನ ಸಂಬಂಧ ದಾಖಲೆ ಮಾಡಿಕೊಡುವುದಾಗಿ ವಾದಿಯರಿಂದ ರೂ. 20,000/- ಹಣ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ವಾದಿಯ ಗಂಡ ತನ್ನ ಜೀವಿತ ಕಾಲದಲ್ಲಿ ದಾವಾ ಸ್ವತ್ತಿನ ಮೇಲೆ ಎಂದೂ ಹಕ್ಕನ್ನು ಪ್ರತಿಪಾದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ ಮೊದಲಿನಿಂದಲೂ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**